ಕೊಡಗು ಜಿಲ್ಲೆಯಲ್ಲಿ ಹಸಿರು ಪಡಿತರ ಚೀಟಿ.

1610(2124)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ(ಸೋಮವಾರಪೇಟೆ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಹಸಿರು ಪಡಿತರ ಚೀಟಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ? ತಾಲ್ಲೂಕುವಾರು ವಿವರ ನೀಡುವುದು.

ಆ) ಮುಟ್ಟುಗೋಲು ಹಾಕಿಕೊಂಡ ಹಸಿರುಪಡಿತರ ಚೀಟಿಯ ಬದಲಿ ವ್ಯವಸ್ಥೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ; ವಿವರ ನೀಡುವುದು.

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ಅನರ್ಹರು ಎಂದು ಕಂಡು ಬಂದ ಹಸಿರು ಪಡಿತರ ಚೀಟಿಗಳನ್ನು ರದ್ದುಮಾಡಿದ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

1.	ಮಡಿಕೇರಿ	-	3722
2.	ವಿರಾಜಪೇಟೆ	-	3574
3.	ಸೋಮವಾರಪೇಟೆ	-	2866
	ಒಟ್ಟು	-	10162

ಆ) ಜಿಲ್ಲೆಯಲ್ಲಿ ಅನರ್ಹ ಕುಟುಂಬಗಳು ಹೊಂದಿದ್ದ ಒಟ್ಟು 10162 ಹಸಿರು ಪಡಿತರ ಚೀಟಿಗಳನ್ನು ರದ್ದುಪಡಿಸಿ ಈ ಕುಟುಂಬಗಳಿಗೆಲ್ಲಾ ಕೇಸರಿ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಕೈಗಾರಿಕಾ ಸ್ಥಾವರ ಪ್ರಾರಂಭ.

1611(2128)